## ಕರ್ನಾಟಕ ವಿಧಾನ ಪರಿಷತ್ತು

### ಶ್ರೀ ಎಂ. ನಾಗರಾಜು, ವಿಧಾನ ಪರಿಷತ್ತಿನ ಸದಸ್ಯರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಲೋಕೋಪಯೋಗಿ ಇಲಾಖೆಯ ಮಾಹಿತಿ:

**ವಿಷಯ:** ದಿನಾಂಕ:11.12.2023 (ಸೋಮವಾರ) ರ 'ಪ್ರಜಾವಾಣಿ' ದಿನ ಪತ್ರಿಕೆಯಲ್ಲಿ "ಖಾನಾಪುರ: ಅನಾಥವಾದ ಸರ್ಕಾರಿ ಕಟ್ಟಡಗಳು" ಸೂಕ್ತ ಬಳಕೆಯಿಲ್ಲದೆ ಪಾಳು ಬಿದ್ದ ಕಟ್ಟಡಗಳು, ಸರ್ಕಾರಿ ಕಛೇರಿಗಳತ್ತಲೂ ನಿರ್ಲಕ್ಷ್ಯ; ಸಾರ್ವಜನಿಕರ ಅಸಮಾಧಾನ - ಎಂಬ ವಿಚಾರವು ವರದಿಯಾಗಿರುತ್ತದೆ.

ಖಾನಾಪುರ ಪಟ್ಟಣದಲ್ಲಿರುವ ಕಂದಾಯ, ಪೋಲೀಸ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇರಿದಂತೆ ವಿವಿಧ ಇಲಾಖೆಗಳ ಸರ್ಕಾರಿ ಕಟ್ಟಡಗಳು ನಾನಾ ಕಾರಣಗಳಿಂದ ಬಳಸಲಾಗುತ್ತಿಲ್ಲ. ಇದರಿಂದಾಗಿ ಅವುಗಳು ಶಿಥಿಲಾವಸ್ಥೆ ತಲುಪಿವೆ. ಕೆಲ ಕಟ್ಟಡಗಳಂತೂ ಅತಿಕ್ರಮಣಗೊಂಡಿವೆ. ಈ ಕಟ್ಟಡಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಹಾಗೂ ಬಳಸಿಕೊಳ್ಳುವಲ್ಲಿ ತಾಲ್ಲೂಕು ಆಡಳಿತ ಎಡವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ನಿರುಪಯುಕ್ತವಾಗಿರುವ ಈ ಕಟ್ಟಡಗಳು ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ. ಮೀನುಗಾರಿಗೆ ಸೇರಿದಂತೆ ಹಲವು ಇಲಾಖೆಗಳಿಗೆ ಇಲ್ಲಿ ಸ್ವಂತ ಕಟ್ಟಡಗಳೇ ಇಲ್ಲ, ಬಾಡಿಗೆ ಕಟ್ಟಡದಲ್ಲಿ ಅವು ಕಾರ್ಯನಿರ್ವಹಿಸುತ್ತಿವೆ. ಹೀಗಾರುವಾಗ ಹಳೆಯ ಕಟ್ಟಡಗಳನ್ನು ಬಳಸಿಕೊಳ್ಳುವುದು ಸಮಂಜಸವಾಗಿರುತ್ತದೆ.

ಆದಕಾರಣ ಸದರಿ ವಿಚಾರದಲ್ಲಿ ಸರ್ಕಾರವು ಕೂಡಲೇ ಕ್ರಮ ಕೈಗೊಂಡು ಸಾರ್ವಜನಿಕ ಅನುಕೂಲ ಮತ್ತು ಹಿತದೃಷ್ಟಿಯಿಂದ ಬಳಸಿಕೊಳ್ಳದೇ ಖಾಲಿಯಿರುವ ಸರ್ಕಾರಿ ಕಟ್ಟಡಗಳನ್ನು ಸ್ವಂತ ಕಟ್ಟಡಗಳಿಲ್ಲದೆ ಇಲಾಖೆಗಳು ಬಳಸುವ ನಿಟ್ಟಿನಲ್ಲಿ ಅಗತ್ಯವಾದ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ಒತ್ತಾಯಿಸುತ್ತೇನೆ.

*****

**ಉತ್ತರ:**

ಖಾನಾಪುರ ಪಟ್ಟಣದಲ್ಲಿರುವ ಕಂದಾಯ, ಪೊಲೀಸ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗಳ ಸರ್ಕಾರಿ ಕಟ್ಟಡಗಳು ಮತ್ತು ಮೀನುಗಾರಿಕೆ ಇಲಾಖೆ ಹಾಗೂ ಹಲವು ಇಲಾಖೆಗಳು ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗದ ವ್ಯಾಪ್ತಿಯಡಿ ಒಳಪಡುವುದಿಲ್ಲ.

ಆದರೆ, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗದಡಿ ಬರುವ ಉಪ-ವಿಭಾಗ ಖಾನಾಪೂರ ಕಛೇರಿಯು ಸ್ವಂತ ಕಟ್ಟಡ ಹೊಂದಿದ್ದು, ಸುಸ್ಥಿತಿಯಲ್ಲಿದ್ದು ಅದನ್ನು ಬಳಸಲಾಗುತ್ತಿದೆ.

ಸಾರ್ವಜನಿಕ ಅನುಕೂಲ ಮತ್ತು ಹಿತದೃಷ್ಟಿಯಿಂದ ಬಳಸಿಕೊಳ್ಳದೇ ಖಾಲಿಯಿರುವ ಸರ್ಕಾರಿ ಕಟ್ಟಡಗಳನ್ನು ಸ್ವಂತ ಕಟ್ಟಡಗಳಿಲ್ಲದೆ ಇರುವ ಇಲಾಖೆಗಳು ಬಳಸುವ ನಿಟ್ಟಿನಲ್ಲಿ ಅಗತ್ಯವಾದ ಕ್ರಮವನ್ನು ಕೈಗೊಳ್ಳಲು ಆಯಾ ಇಲಾಖೆಗಳು ತೀರ್ಮಾನಿಸಬಹುದಾಗಿರುತ್ತದೆ.

ಸಂಖ್ಯೆ: ಲೋಇ 54 ಬಿಎಲ್ ಕ್ಯೂ 2023

**(ಸತೀಶ್ ಜಾರಕಿಹೊಳಿ)**
ಮಾನ್ಯ ಲೋಕೋಪಯೋಗಿ ಸಚಿವರು.